ಅದು ಮುಂಚೂಣಿಯ ತಂತ್ರಜ್ಞಾನವನ್ನು ಹೊತ್ತ ಬೃಹತ್ ಕಂಪ್ಯೂಟರ್ ಆಗಿತ್ತು. ಇದನ್ನು ಐ.ಐ.ಎಮ್. ಅಹಮದಾಬಾದಿನಲ್ಲಿ ಸ್ಥಾಪಿಸಿದ ಈ ಸಮಯದಲ್ಲಿ ವಿಜಯರಾಘವನ್, ಆಗ ಐ.ಐ.ಎಮ್.ನ 'ಕಂಪ್ಯೂಟರ್ ಸೆಂಟರ್'ನಲ್ಲಿ ಚೀಫ್ ಸಿಸ್ಟಮ್ಸ್ ಪ್ರೋಗ್ರಾಮರ್ ಆಗಿ ಕೆಲಸ ಮಾಡುತ್ತಿದ್ದ ಎನ್.ಆರ್. ನಾರಾಯಣ ಮೂರ್ತಿಯವರನ್ನು ಭೇಟಿಯಾಗಿದ್ದರು. ಐ.ಐ.ಎಮ್. ಅಹಮದಾಬಾದ್, ವಿಶ್ವದಲ್ಲಿಯೇ ಇಂತಹ ಕಂಪ್ಯೂಟರ್ ಪಡೆದ ಮೂರನೇ ಬಿಸಿನೆಸ್ ಸ್ಕೂಲ್ ಆಗಿತ್ತು. ಇತ್ತ ಶಾಂತಾ 'ಡಾ. ವಾಡಿಯಾ ಅಸೋಸಿಯೇಟ್ಸ್'ನ ಎರಡು ಪ್ರಾಜೆಕ್ಟ್‌ಗಳಿಗೆ 'ಕನ್‌ಸಲ್ಟೆಂಟ್' ಆಗಿ ಕೆಲಸ ಮಾಡಿದರು. ಇದು ಮನೆಯಿಂದಲೇ ಮಾಡಿದ ಕೆಲಸ.

## 'ಮೈಕ್ರಾನಿಕ್ ಡಿವೈಸಸ್' ಕಂಪನಿ ಸ್ಥಾಪನೆ

ಅಮೆರಿಕದಲ್ಲಿ ಓದಿ, ಭಾರತಕ್ಕೆ ಹಿಂತಿರುಗಿದಾಗಲೇ ವಿಜಯರಾಘವನ್ ಅವರಿಗೆ ತಮ್ಮದೇ ಆದ ಕಂಪನಿ ಆರಂಭಿಸುವ ಯೋಚನೆ ಇತ್ತು. ಉದ್ಯಮದ ಕೇಂದ್ರವಾದ ಬಾಂಬೆ ಅದಕ್ಕೆ ತಕ್ಕ ಪರಿಸರವನ್ನು ಒದಗಿಸಿತ್ತು. ಇದೀಗ ಅವರಿಗೆ ಅನುಭವವೂ ಕೂಡಿತ್ತು. 'ಬ್ಲೂ ಸ್ಟಾರ್' ಜೊತೆಯಲ್ಲಿ ಐದು ವರ್ಷದ ಬಾಂಡ್ ಇದ್ದ ಕಾರಣ, ವಿಜಯರಾಘವನ್ ಈಗಲೇ ಹೊರಬರುವಂತಿರಲಿಲ್ಲ. ಆದರೆ ಎಂಜಿನಿಯರಿಂಗ್ ಪದವಿ ಪಡೆದು, ಎಲೆಕ್ಟ್ರಾನಿಕ್ ರಂಗದ ಅನುಭವ ಗಳಿಸಿದ್ದ ಶಾಂತಾ ಅವರ ಉತ್ಸಾಹ ಮತ್ತು ಬೆಂಬಲ, ಕಂಪನಿಯ ಸ್ಥಾಪನೆಯನ್ನು ಸಾಧ್ಯವಾಗಿಸಿತು.

1974ರಲ್ಲಿ 'ಮೈಕ್ರಾನಿಕ್ ಡಿವೈಸಸ್' ಕಂಪನಿ, ಶಾಂತಾ, ಶೇಷಾದ್ರಿ ಮತ್ತು ರಾಜಂ ಆನಂದರಾಮ್ – ಈ ಮೂವರ ಹೆಸರಿನಲ್ಲಿ ರಿಜಿಸ್ಟರ್ ಆಯಿತು. ಕಂಪನಿಯ ಬಿಸಿನೆಸ್ ಆಪರೇಷನ್ಸ್ ಎಲ್ಲವೂ, ಶಾಂತಾ ಅವರ ಮನೆಯಿಂದಲೇ ನಡೆಯತೊಡಗಿತು. ಹೊಸದಾಗಿ ತೆರೆದ ಕಂಪನಿಯ ಕೆಲಸಗಳನ್ನೆಲ್ಲ ಆರಂಭಿಸಿ ನಿಭಾಯಿಸುವುದು ಶಾಂತಾ ಅವರಿಗೆ ಸುಲಭವಿತ್ತು. ಪ್ರತಿ ಸಂಜೆ, ವಿಜಯರಾಘವನ್, ಆನಂದರಾಮ್ ಮತ್ತು ಶೇಷಾದ್ರಿ ಅವರೊಡನೆ ಕಚೇರಿಯ ಕೆಲಸ ಊಟದ ಮೇಜಿನ ಮೇಲೆ ಮುಂದುವರೆಯುತ್ತಿತ್ತು.

'ಮೈಕ್ರಾನಿಕ್' ಕಂಪನಿ ಮೊದಲಿಗೆ ಮಾರಾಟ ಮಾಡಿದ ವಸ್ತು ಮೆಡಿಕಲ್ ಎಲೆಕ್ಟ್ರಾನಿಕ್ಸ್‌ಗೆ ಸಂಬಂಧಿಸಿದ 'ಇಂಪ್ಲಾಂಟೆಬಲ್ ಪೇಸ್‌ಮೇಕರ್' ಆಗಿತ್ತು. ಆಗದು ಮುಂಚೂಣಿಯ ತಂತ್ರಜ್ಞಾನದ ಪ್ರಾಡಕ್ಟ್ ಆಗಿತ್ತು, ಜೀವ ಉಳಿಸುವ ಸಲಕರಣೆಯಾಗಿತ್ತು.

ನಂತರ ಡಿಫಿಬ್ರಿಲೇಟರ್, ಫೀಟಲ್ ಮಾನಿಟರಿಂಗ್ ಸಿಸ್ಟಮ್ ಮುಂತಾದ ಮತ್ತಷ್ಟು ವೈದ್ಯಕೀಯ ಸಲಕರಣೆಗಳ ವಿತರಣೆಯನ್ನು ಕಂಪನಿ ತೆಗೆದುಕೊಂಡಿತು. 1975ರಲ್ಲಿ ವಿಜಯರಾಘವನ್ ತಮ್ಮ 5 ವರ್ಷದ ಬಾಂಡ್ ಸಮಯ ಮುಗಿಸಿ 'ಬ್ಲೂ ಸ್ಟಾರ್'ನಿಂದ ಹೊರಬಂದು, 'ಮೈಕ್ರೋನಿಕ್ ಡಿವೈಸಸ್' ಸೇರಿದರು.

ಈಗ ಹತ್ತಿರದ ಗರಾಜ್ ಒಂದಕ್ಕೆ ಕಚೇರಿಯನ್ನು ಸ್ಥಳಾಂತರಿಸಲಾಯಿತು. ಇಷ್ಟು ಹೊತ್ತಿಗೆ ಕಂಪನಿ ಚೆನ್ನಾಗಿಯೇ ಕೆಲಸ ಮಾಡುತ್ತಿತ್ತು. ಈ ಸಮಯದಲ್ಲಿ ಅಮೆರಿಕದ 'ಕಂಪ್ಯೂಟರ್ಸ್ ಆಟೊಮೇಷನ್ ಇನ್‌ಕಾರ್ಪೊರೇಷನ್' (ಸಿ.ಎ.ಐ.) ಜೊತೆ 'ಸಿಂಗಲ್ ಬೋರ್ಡ್ ಕಂಪ್ಯೂಟರ್ಸ್'ಗೆ ಮಾತುಕತೆ ನಡೆದಿತ್ತು. ಆ ಕಂಪನಿಯಿಂದ ಜೋಸ್ ಎಲಿಯಾಡೋ, ಇವರ ಕಂಪನಿಯನ್ನು ಪರಿಶೀಲಿಸಲು ಬಂದರು. 'ಸಿಂಗಲ್ ಬೋರ್ಡ್ ಕಂಪ್ಯೂಟರ್'ನಲ್ಲಿ, ಕಂಪ್ಯೂಟರನ್ನು ಒಂದೇ 'ಸರ್ಕ್ಯೂಟ್ ಬೋರ್ಡ್' ಮೇಲೆ ನಿರ್ಮಿಸಲಾಗಿತ್ತು. ಮೈಕ್ರೋಪ್ರಾಸಸರ್, ಮೆಮೊರಿ, ಇನ್‌ಪುಟ್/ಔಟ್‌ಪುಟ್ ಮತ್ತಿತರ ಅಗತ್ಯದ ವೈಶಿಷ್ಟ್ಯಗಳು ಒಂದೇ ಸರ್ಕ್ಯೂಟ್ ಬೋರ್ಡ್ ಮೇಲಿದ್ದವು. ಎಲಿಯಾಡೋಗೆ ಕಂಪನಿ ಇಷ್ಟವಾಯಿತು, ಮೈಕ್ರಾನಿಕ್ ಕಂಪನಿಗೆ 'ಡಿಸ್ಟ್ರಿಬ್ಯೂಟರ್' ಆಗುವ ಅವಕಾಶ ಸಿಕ್ಕಿತು. ಕಂಪನಿ ದೇಶಕ್ಕೆ ಹೊಸದಾದ ತಂತ್ರಜ್ಞಾನವನ್ನು ತರುವುದರಲ್ಲಿ ಯಶಸ್ವಿಯಾಗಿತ್ತು.

'ಮೈಕ್ರಾನಿಕ್ ಡಿವೈಸಸ್' ಚೆನ್ನಾಗಿ ಬೆಳೆಯಿತು. ಬಹಳಷ್ಟು ಸರ್ಕಾರಿ ಪಬ್ಲಿಕ್ ಸೆಕ್ಟರ್ ಕಂಪನಿಗಳು ಇವರ ಗ್ರಾಹಕರಾದರು. 'ಡಿಸ್ಟ್ರಿಬ್ಯೂಷನ್' ಕೆಲಸದ ಜೊತೆಗೆ 'ಸರ್ವಿಸಿಂಗ್' ವಿಭಾಗವೊಂದನ್ನು ತೆರೆದಿದ್ದರು.

1976ರಲ್ಲಿ, ಶಾಂತಾ ಮತ್ತು ವಿಜಯರಾಘವನ್ ತಮ್ಮ ಕಂಪನಿಯನ್ನು ಮುಂದೆ ನಡೆಸಲು ಅಗತ್ಯವಾದ ತರಪೇತು ಪಡೆಯಲು ಅಮೆರಿಕಗೆ ಪ್ರವಾಸ ಕೈಗೊಂಡರು. ಎರಡು ತಿಂಗಳ ಈ ಸಮಯದಲ್ಲಿ ಮಕ್ಕಳಿಗೆ ಬೇಸಿಗೆ ರಜೆ ಇತ್ತು, ಅವರನ್ನು ತಾತ–ಅಜ್ಜಿಯ ಜೊತೆ ಬೆಂಗಳೂರಿನಲ್ಲಿ ಬಿಟ್ಟು ಅಮೆರಿಕಗೆ ಹೊರಟರು. ಮುಖ್ಯವಾಗಿ ಲಾಸ್ ಏಂಜಲೀಸ್‌ನಲ್ಲಿ 'ಕಂಪ್ಯೂಟರ್ ಆಟೊಮೇಷನ್' ತರಪೇತು ಕೋರ್ಸ್ ಮಾಡಿದರು. ತಮ್ಮ ಉದ್ಯಮವನ್ನು ಮೇಲಿನ ಹಂತಕ್ಕೆ ತೆಗೆದುಕೊಂಡು ಹೋಗಲು, ಉಳಿದ ಅನೇಕ ಕಂಪನಿಗಳಲ್ಲೂ ತರಪೇತು ಪಡೆದರು.

ಈ ಸಮಯ ಶಾಂತಾ ಅವರಿಗೆ ಅತ್ಯಂತ ರೋಚಕವಿತ್ತು; ಮುಂಚೂಣಿಯ ತಂತ್ರಜ್ಞಾನವನ್ನು ಪರಿಚಯ ಮಾಡಿಕೊಳ್ಳುವ, ಬಹಳಷ್ಟು ಕಲಿಯುವ ಅವಕಾಶ ಅದಾಗಿತ್ತು. 1970ರ ದಶಕದಲ್ಲಿ ವಿದ್ಯಾವಂತರಿದ್ದರೂ ಹೆಣ್ಣುಮಕ್ಕಳಿಗೆ ವಿದೇಶಕ್ಕೆ ಹೋಗಿ ತಂತ್ರಜ್ಞಾನದಲ್ಲಿ ತರಪೇತು ಪಡೆಯುವ ಅವಕಾಶ ದೊರೆಯುವುದು ಅಪರೂಪವಿತ್ತು. ಪತ್ನಿಯನ್ನು ವೃತ್ತಿರಂಗದಲ್ಲಿ ತಮ್ಮ ಸಮಾನಳಾಗಿ ನಡೆಸಿಕೊಂಡ ಪತಿಯ ಸಾಂಗತ್ಯ, ಶಾಂತಾ ಅವರಿಗೆ ಜೀವನದುದ್ದದ ಸಂತಸದ ವಿಷಯವಾಗಲಿತ್ತು.

ಕಂಪನಿಯಲ್ಲಿ ಅದಾಗಲೇ 30 ನೌಕರರು ಇದ್ದ ಕಾರಣ, 'ಸಿಯಾನ್ ಇಂಡಸ್ಟ್ರಿಯಲ್ ಎಸ್ಟೇಟ್'ಗೆ ಕಚೇರಿಯನ್ನು ವರ್ಗಾಯಿಸುವುದು ಅನಿವಾರ್ಯವಾಗಿತ್ತು. 1979 ಮತ್ತು 1980ರಲ್ಲಿ, 'ಇಂಟೆಲ್' ಪ್ರಾಡಕ್ಟ್‌ಗೆ ಮಾತುಕತೆ ನಡೆಯುತ್ತಿದ್ದ ಸಮಯ. ವಿಜಯರಾಘವನ್ ಎರಡು ಬಾರಿ ಅಮೆರಿಕಗೆ ಹೋಗಿ ಬಂದು



ಮಕ್ಕಳೊಂದಿಗೆ ಶಾಂತಾ – ವಿಜಯರಾಘವನ್ ದಂಪತಿ